ಸಾಕ್ಷಿಗೆ ದಿನಾಂಕ 16-02-2026 ರಂದು ಪ್ರಮಾಣ ವಚನ ಭೋದಿಸಲಾಯಿತು.

C.W.: 1

ಮುಂದುವರೆದ ಮುಖ್ಯ ವಿಚಾರಣೆಃ

ನಾನು ಈ ಹಿಂದೆ ಮಾನ್ಯ ನ್ಯಾಯಾಲಯಕ್ಕೆ ನಿಸಿ-1 ರಂತೆ ಕಮಿಷನರ್ ವರದಿಯನ್ನು ಸಲ್ಲಿಸಿರುತ್ತೇನೆ. ಈ ಹಿಂದೆ ಸಲ್ಲಿಸಿರುವಂತಹ ಕಮಿಷನರ್ ವರದಿಗೆ ಪೂರಕವಾಗುವ ರೀತಿಯಲ್ಲಿ ನಿಖರವಾದ ಅಳತೆಯೊಂದಿಗೆ ಸದರಿ ಕಮಿಷನರ್ ವರದಿಗೆ ಪೂರಕವಾದ ಮುಂದುವರೆದ 14 ಪುಟಗಳ ಕಮಿಷನರ್ ವರದಿಯನ್ನು ಸಲ್ಲಿಸಿದ್ದು ಉಭಯ ವಕೀಲರ ಹಾಜರಾತಿಯಲ್ಲಿ ಸದರಿ ದಾಖಲೆಯನ್ನು ನಿಸಿ-1 ಬಿ ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ವಾದಿ ಪರ ಶ್ರೀ ಎಸ್ ಎಲ್ ಜಿ ವಕೀಲರಿಂದಃ-

ಕೋರ್ಟ ಕಮಿಷನರ್ ವರದಿಯ ಪುಟ ನಂ.1 ರ ಖಂಡಿಕೆ ನಂ.5 ರಲ್ಲಿ ನೀಡಿರುವಂತಹ ಅಳತೆ ಸರಿಯಾಗಿರುತ್ತದೆ. ನಾನು ಮೇಲೆ ವಿವರಿಸಿರುವಂತಹ ಖಂಡಿಕೆ ನಂ.5 ರಂತೆ ಒತ್ತುವರಿ ಮಾಡಿ ಕಟ್ಟಡ ನಿರ್ಮಾಣ ಮಾಡಿರುವುದಿಲ್ಲ. ಆದರೆ ನಮ್ಮ ಪುರಸಭೆ ಪರವಾನಿಗೆಯಂತೆ ಸೆಟ್ ಬ್ಯಾಕನ್ನು ವಾದಿಯು ಬಿಟ್ಟಿರುವುದಿಲ್ಲ.ಸದರಿ ಕಮಿಷನರ್ ವರದಿಯ ಪುಟ ನಂ.1 ರ ಖಂಡಿಕೆ ನಂ.8 ರಲ್ಲಿ ಪೂಃ5 ಅಡಿ ಸೆಟ್ ಬ್ಯಾಕನ್ನು ಬಿಡಬೇಕಾಗಿತ್ತು ಆದರೆ ಅವರು ತಮ್ಮ ಅನುಕೂಲಕ್ಕಾಗಿ 8.6 ಅಡಿ ಸೆಟ್ ಬ್ಯಾಕನ್ನು ಬಿಟ್ಟಿರುತ್ತಾರೆ. ಅದೇ ರೀತಿ ಸದರಿ ಖಂಡಿಕೆಯಲ್ಲಿ ಹೇಳಿರುವ ಹಾಗೆ ವಾದಿಯು ಪಶ್ಚಿಮ, ಉತ್ತರ ಮತ್ತು ದಕ್ಷಿಣಕ್ಕೆ ಸೆಟ್ ಬ್ಯಾಕನ್ನು ಬಿಟ್ಟಿದ್ದಾರೆಂದರೆ ಸರಿ. ಸದರಿ ಕಮಿಷನರ್ ವರದಿಯ ಪುಟ ನಂ.6 ರ ನಕಾಶೆಯಂತೆ ಪ್ಲಾಟ್ ನಂ.81 ರ ಉತ್ತರ ದಕ್ಷಿಣ ಅಳತೆ 21 ಅಡಿ ಇರುತ್ತದೆ. ವಾದಿಯು ತನ್ನ ಪ್ಲಾಟಿನ 21 )( 51 ಅಡಿ ವಿಸ್ತೀರ್ಣದ ಜಾಗದ ಒಳಗಡೆ ವಾದಿಯು ಕಟ್ಟಿದ್ದಾರೆಂದರೆ ಸರಿ ಸಾಕ್ಷಿ ಮುಂದುವರೆದು 21 )( 51 ನಿವೇಶನದ ಅಳತೆಯಾಗಿದ್ದು ವಾದಿಯು 15 )( 42 ಅಡಿ ಒಳಗಾಗಿ ಕಟ್ಟಡವನ್ನು ನಿರ್ಮಾಣ ಮಾಡಿಕೊಳ್ಳಬೇಕಾಗಿತ್ತು ಎನ್ನುತ್ತಾರೆ. ಸದರಿ ನಕಾಶೆಯಲ್ಲಿ ವಾದಿಯ ಆಸ್ತಿಯ ದಕ್ಷಿಣ ದಿಕ್ಕಿಗೆ ತೋರಿಸಿರುವಂತಹ ಕಾಂಪೌಂಡ್ ವಾಲ್ 51 ಅಡಿ ಉದ್ದ ಮತ್ತು ಅದರ ಎತ್ತರ 5 ಅಡಿ ಹಾಗೂ ಅದರ ಅಗಲ 9 ಇಂಚು ಇದೆ. ಸದರಿ ಕಾಂಪೌಂಡ್ ವಾಲ್ ವಾದಿಯ ಜಾಗದಲ್ಲಿ ಬರುವುದಿಲ್ಲ. ವಾದಿಯು ಪ್ರತಿವಾದಿಯ ಆಸ್ತಿಯಲ್ಲಿ ಒತ್ತುವರಿ ಮಾಡಿ ಮನೆ ಏನಾದರೂ ಕಟ್ಟಿದ್ದಾರಾ ಎಂದರೆ ಇಲ್ಲ. ಸದರಿ ನಕಾಶೆಯಲ್ಲಿ ದಕ್ಷಿಣ ದಿಕ್ಕಿಗಿರುವಂತಹ ಕಾಂಪೌಂಡ್ ಗೋಡೆಯನ್ನು ವಾದಿಯ ಜಾಗದಲ್ಲಿ ಪ್ರತಿವಾದಿಯು ಕಟ್ಟಿಕೊಂಡಿರುತ್ತಾನೆಂದರೆ ಸಾಕ್ಷಿಯು 6 ಇಂಚು ವ್ಯತ್ಯಾಸದಲ್ಲಿ ಕಟ್ಟಿಕೊಂಡಿದ್ದಾರೆನ್ನುತ್ತಾರೆ.

ಪಾಟೀ ಸವಾಲುಃ 1 ಮತ್ತು 2 ನೇ ಪ್ರತಿವಾದಿ ಪರ ಶ್ರೀ ಕೆ ಎಸ್ ಎಸ್ ವಕೀಲರಿಂದಃ-

ವಾದಿಯ ಆಸ್ತಿಯ ಉತ್ತರ ದಿಕ್ಕಿಗೆ ಜವಳಿ ಉಮಾಪತಿ ಇವರ ಮನೆ ಇದೆ. ಸಾಮಾನ್ಯವಾಗಿ ಇಟ್ಟಗಿ ಗೋಡೆ ಮತ್ತು ಕಲ್ಲಿನ ಗೋಡೆಯಲ್ಲಿ ಅಗಲದ ವ್ಯತ್ಯಾಸ ಬರುತ್ತದೆಂದರೆ ಸರಿ. ಸಾಮಾನ್ಯವಾಗಿ ಇಟ್ಟಗಿ ಗೋಡೆ ಅಗಲ 9 ಇಂಚು ಇರುತ್ತದೆ. ಕಲ್ಲಿನ ಗೋಡೆ ಎಂದರೆ ಕನಿಷ್ಠ 1 ಅಡಿ ಅಗಲ ಇರುತ್ತದೆ. ಸಾಮಾನ್ಯವಾಗಿ ಕಲ್ಲಿನ ಗೋಡೆಯ ಅಗಲ 18 ಇಂಚು ಇರುತ್ತದೆಂದರೆ ಸಾಕ್ಷಿಯು ಮೊದಲು ಇರುತ್ತಿತ್ತು ಈಗ 1 ಅಡಿ ಅಗಲದ್ದು ಇರುತ್ತದೆನ್ನುತ್ತಾರೆ. ಮೊದಲು ಅಂದರೆ ಸುಮಾರು 20 ವರ್ಷದ ಹಿಂದೆ ಆ ರೀತಿ ಇರುತ್ತಿತ್ತು. ಈಗ 20 ವರ್ಷದ ಹಿಂದೆ ಕಲ್ಲಿನ ಗೋಡೆ 18 ಇಂಚು ಇರುತ್ತಿತ್ತು. ವಾದಿಯ ಮನೆ ಎಷ್ಟು ವರ್ಷ ಹಳೆಯದು ಎಂದು ನನಗೆ ಗೊತ್ತಿಲ್ಲ. ವಾದಿಯ ಮನೆಯ ಉತ್ತರ ದಿಕ್ಕಿಗೆ ಇರುವ ಕಾಮನ್ ವಾಲ್ 18 ಇಂಚು ಅಗಲದ್ದು ಇದೆ ಎಂದರೆ ಸಾಕ್ಷಿಯು ಉಭಯ ಪಕ್ಷಕಾರರು ಕಾಮನ್ ವಾಲ್ ಬಗ್ಗೆ ಯಾವುದೇ ದಾಖಲೆ ಪೂರೈಸಿಲ್ಲ ಆದ್ದರಿಂದ ನಾನು ಆ ಬಗ್ಗೆ ಅಳತೆ ಮಾಡಿಲ್ಲವೆನ್ನುತ್ತಾರೆ. ವಾದಿಯ ಆಸ್ತಿಯ ದಕ್ಷಿಣ ದಿಕ್ಕಿಗೆ ಇರುವಂತಹ ಕಾಂಪೌಂಡ್ ವಾಲ್ ಒಳಗಡೆ ವಾದಿಯ ಆಸ್ತಿ ಇದೆಯಾ ಎಂದರೆ ಸಾಕ್ಷಿಯು ಪರಶುರಾಮ್ ಇವರು ವಾದಿಯ ಆಸ್ತಿಯಲ್ಲಿ 6 ಇಂಚು ಜಾಗವನ್ನು ಒತ್ತುವರಿ ಮಾಡಿಕೊಂಡು ಸದರಿ ಕಾಂಪೌಂಡ್ ವಾಲನ್ನು ಕಟ್ಟಿದ್ದಾರೆನ್ನುತ್ತಾರೆ. ಕಾಮನ್ ವಾಲನ್ನು ಬಿಟ್ಟು ಬಿಟ್ಟು 21 )( 51 ಅಡಿ ಜಾಗದಂತೆ ವಾದಿಯ ಜಾಗವನ್ನು ಅಳತೆ ಮಾಡಿರುತ್ತೇನೆ. ಕಾಮನ್ ವಾಲ್ ಇಬ್ಬರೂ ಪಾರ್ಟಿದಾರರಿಗೆ ಸೇರಿದ್ದು ಇರುತ್ತದೆಂದರೆ ಸರಿ ಆ ಬಗ್ಗೆ ಕರಾರು ಆಗಬೇಕೆನ್ನುತ್ತಾರೆ. ಸಾಮಾನ್ಯವಾಗಿ ಇಬ್ಬರೂ ಪಾರ್ಟಿದಾರರು ತಲಾ 9 ಇಂಚು ಹಂಚಿಕೆ ಮಾಡಿಕೊಂಡು ಕಾಮನ್ ವಾಲನ್ನು ಕಟ್ಟಿಕೊಳ್ಳುತ್ತಾರೆಂದರೆ ಸಾಕ್ಷಿಯು ಅವರುಗಳ ನಡುವೆಯಾದಂತಹ ಕರಾರಿನಂತೆ ಆ ರೀತಿ ಕಟ್ಟಿಕೊಳ್ಳುತ್ತಾರೆನ್ನುತ್ತಾರೆ. ಸದರಿ ಕಾಮನ್ ವಾಲ್ ಸಂಪೂರ್ಣವಾಗಿ ವಾದಿಯ ಆಸ್ತಿಯಲ್ಲಿ ಬರುತ್ತದೆಂದರೆ ಸರಿಯಲ್ಲ ಸಾಕ್ಷಿಯು ನನಗೆ ಕಾಮನ್ ವಾಲ್ ಬಗ್ಗೆ ಯಾವುದೇ ದಾಖಲೆಯನ್ನು ಪೂರೈಸಿಲ್ಲ ಆದ್ದರಿಂದ ಅಳತೆಯನ್ನು ಮಾಡಿಲ್ಲವೆನ್ನುತ್ತಾರೆ. ಸದರಿ ಕಾಮನ್ ವಾಲ್ ವಾದಿಯ ಆಸ್ತಿಯಲ್ಲಿ ಬರುತ್ತದಂತಾ ನನಗೆ ಗೊತ್ತಿದ್ದರೂ ಸಹಾ ವಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಕಾಮನ್ ವಾಲಿನಿಂದ ಹಿಡಿದು ಪರಶುರಾಮ್ ಇವರ ಮನೆಯ ಕಡೆ ಇರುವ ಕಾಂಪೌಂಡ ವಾಲ್ ಕಡೆಗೆ ವಾದಿಯ ಆಸ್ತಿಯ ಅಳತೆ 21.6 ಅಡಿ ಇರುತ್ತದೆ. ಪ್ರತಿವಾದಿಯರು ವಾದಿಯ ಆಸ್ತಿಯಲ್ಲಿ ಯಾವುದೇ ಒತ್ತುವರಿ ಮಾಡಿ ಕಾಂಪೌಂಡ್ ವಾಲನ್ನು ಕಟ್ಟಿಲ್ಲ ಅವರು ತಮ್ಮ ಆಸ್ತಿಯಲ್ಲಿ ಕಾಂಪೌಂಡ್ ವಾಲನ್ನು ಕಟ್ಟಿಕೊಂಡಿರುತ್ತಾರೆಂದರೆ ಸರಿಯಲ್ಲ.

ವಾದಿಯು ತನ್ನ ಆಸ್ತಿಯ ದಕ್ಷಿಣ ದಿಕ್ಕಿಗೆ ನಿಯಮದ ಪ್ರಕಾರ 3 ಅಡಿ ಜಾಗವನ್ನು ಬಿಟ್ಟು ಮನೆಯನ್ನು ಕಟ್ಟಬೇಕಾಗಿತ್ತು ಆದರೆ ಅವರು 2 ಅಡಿ ಜಾಗ ಬಿಟ್ಟು ಮನೆಯನ್ನು ಕಟ್ಟಿದ್ದಾರೆ. ಒಂದು ಅಡಿ ಇನ್ನೂ ಜಾಗವನ್ನು ದಕ್ಷಿಣ ದಿಕ್ಕಿಗೆ ವಾದಿ ಬಿಡಬೇಕಾಗಿತ್ತು ಆದರೆ ವಾದಿಯು ಕೇವಲ 2 ಅಡಿ ಜಾಗ ಬಿಟ್ಟಿರುವುದರಿಂದ ಪರಶುರಾಮ್ ಇವರು ತಕರಾರು ಮಾಡಿದ್ದರಿಂದ ಪರಶುರಾಮ್ ಇವರು 6 ಇಂಚು ವಾದಿಯ ಜಾಗವನ್ನು ಒತ್ತುವರಿ ಮಾಡಿ ಕಾಂಪೌಂಡ್ ಕಟ್ಟಿದ್ದಾಂರತಾ ನಾನು ಸುಳ್ಳು ಹೇಳುತ್ತಿದ್ದೇನೆಂದರೆ ಸರಿಯಲ್ಲ. ಈ ಎಲ್ಲಾ ವಿಚಾರ ಗೊತ್ತಿದ್ದರೂ ಸಹಾ ಸುಳ್ಳು ವರದಿ ಸಲ್ಲಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲಃ

(ಮುಕ್ತ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.)

ಓ ಹೇ ಕೇ ಸರಿ ಇದೆ,

ಸಿವಿಲ್ ಮತ್ತು ಜೆ ಎಂ ಎಫ್ ಸಿ.,
ಹಗರಿಬೊಮ್ಮನಹಳ್ಳಿ